ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1603

ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 11.03.2022.

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯ ಸರ್ಕಾರದ ಸಾರಿಗೆ ಸಂಸ್ಥೆಯಾದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿ.ಎಂ.ಟಿ.ಸಿ)ಯು ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಸರ್ಕಾರದ ಗಮನಕ್ಕೆ ಬಂದಿದೆ.
ಆ.	ಹಾಗಿದ್ದಲ್ಲ, ಕಳೆದ 5 ವರ್ಷದಲ್ಲಿ ಆದ ನಷ್ಟವೆಷ್ಟು; ಮತ್ತು ನಷ್ಟಕ್ಕೆ ಕಾರಣಗಳೇನು; (ವರ್ಷಾವಾರು ಅಂಕಿ ಅಂಶಗಳನ್ನು ನೀಡುವುದು)	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕಳೆದ 05 ವರ್ಷಗಳಲ್ಲಿ ಅನುಭವಿಸಿರುವ ನಷ್ಟದ ವಿವರ ಈ ಕೆಳಕಂಡಂತಿದೆ:- (ರೂ.ಲಕ್ಷಗಳಲ್ಲಿ) (see table below)

(ರೂ.ಲಕ್ಷಗಳಲ್ಲಿ)

ವರ್ಷ	ನಷ್ಟದ ಮೊತ್ತ
2016-17	26091.01
2017-18	21761.46
2018-19	34948.74
2019-20	54934.33
2020-21 (ಪ್ರಾವಿಷನಲ್)	16419.98
ಒಟ್ಟು	**154155.52**

ಸಂಸ್ಥೆಯ ಒಟ್ಟಾರೆ ವೆಚ್ಚದಲ್ಲಿ ಸುಮಾರು ಶೇ.80ರಷ್ಟು ಪಾಲು ಸಿಬ್ಬಂದಿ ವೆಚ್ಚ ಮತ್ತು ಇಂಧನ ವೆಚ್ಚಗಳಾಗಿರುತ್ತದೆ. ಸಂಸ್ಥೆಯು ನಷ್ಟವನ್ನು ಅನುಭವಿಸಲು ಈ ಕೆಳಗಿನ ಅಂಶಗಳು ಪ್ರಮುಖ ಕಾರಣವಾಗಿರುತ್ತದೆ.

- ಬೆಂ.ಮ.ಸಾ.ಸಂಸ್ಥೆಯಲ್ಲಿ ಕಳೆದ 07 ವರ್ಷಗಳಿಂದ ಬಸ್ ದರ ಪರಿಷ್ಕರಣೆ ಮಾಡಿರುವುದಿಲ್ಲ.
- ಪ್ರತಿ ಮಾಹೆ ಹೆಚ್ಚಾಗುತ್ತಿರುವ ಇಂಧನ ದರದಿಂದಾಗಿ ಅಧಿಕವಾಗುತ್ತಿರುವ ಇಂಧನ ವೆಚ್ಚ.
- ಉಗ್ರಾಣ ಸಾಮಗ್ರಿಗಳ ವೆಚ್ಚ ಹೆಚ್ಚಾಗಿರುವುದು.

		• ಸಂಸ್ಥೆಯ ವಾಹನಗಳಲ್ಲಿ ಸಂಚರಿಸುತ್ತಿದ್ದ ಅಂದಾಜು ಸುಮಾರು 5 ಲಕ್ಷದಷ್ಟು ಪ್ರಯಾಣಿಕರು ನಮ್ಮ ಮೆಟ್ರೋ ರೈಲಿಗೆ ವರ್ಗಾವಣೆಗೊಂಡ ಅನುಸಾರ ಸಾರಿಗೆ ಆದಾಯ ಗಳಿಕೆಯಲ್ಲಿ ಇಳಿಮುಖವಾಗಿರುತ್ತದೆ. • ಬೆಂಗಳೂರು ಮಹಾನಗರದಲ್ಲಿ ಓಲಾ, ಊಬರ್, ಇತರೇ ಕ್ಯಾಬ್‌ಗಳ ಕಾರ್ಯಾಚರಣೆಯಿಂದಾಗಿ ಸಾರಿಗೆ ಆದಾಯದ ಗಳಿಕೆಯಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. • ಸಂಸ್ಥೆಯು ಬೆಂಗಳೂರು ನಗರಕ್ಕೆ ಸಾರಿಗೆ ಸೌಲಭ್ಯ ಒದಗಿಸಲು ಏಕಸ್ವಾಮ್ಯತೆಯನ್ನು ಹೊಂದಿರುತ್ತದೆ. ನಗರದಲ್ಲಿ ದಿನೇ ದಿನೇ ಖಾಸಗಿ ವಾಹನಗಳ ಸಂಖ್ಯೆಯು ಹೆಚ್ಚಾಗಿ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಂಸ್ಥೆಯ ಭೌತಿಕ ಅಂಶಗಳ ಗುರಿಯನ್ನು ಸಾಧಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿದೆ. • ಸಂಚಾರ ದಟ್ಟಣೆಯಿಂದ ನಿಗದಿತ ಕಿ.ಮೀ.ಗಳ ಆಚರಣೆ ಕಷ್ಟಸಾಧ್ಯವಾಗಿದ್ದು, ವಾಹನಗಳ ಬಳಕೆ (Vehicle Utilization) ಕಡಿಮೆಯಾಗಿರುತ್ತದೆ. • ಮಾರ್ಚ್-2020ರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಪ್ರಯಾಣಿಕರು ಸಾರ್ವಜನಿಕ ಬಸ್ ಬಳಕೆಯನ್ನು ಕಡಿಮೆಗೊಳಿಸಿರುತ್ತಾರೆ.
ಇ.	ಹೆಚ್ಚು ನಷ್ಟದಲ್ಲಿದ್ದರೂ ಸಹ ಬಿ.ಎಸ್-6 ಮಾದರಿಯ ಬಸ್ಸುಗಳನ್ನು ಖರೀದಿಸಲು ಸರ್ಕಾರ ಮುಂದಾಗಿರುವುದು ಸರಿಯೇ; ಎಷ್ಟು ಬಸ್ಸುಗಳನ್ನು ಖರೀದಿಸಲಾಗುತ್ತಿದೆ ಹಾಗೂ ಅವುಗಳ ಒಟ್ಟು ಮೊತ್ತವೆಷ್ಟು? (ಪ್ರತಿ ಬಸ್ಸಿನ ಬೆಲೆಯೊಂದಿಗೆ ಮಾಹಿತಿ ನೀಡುವುದು)	ಬೆಂ.ಮ.ಸಾ.ಸಂಸ್ಥೆಯು ಸಾಮಾಜಿಕ ಹೊಣೆಗಾರಿಕೆಯೊಂದಿಗೆ ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಕರ್ಯವನ್ನು ಒದಗಿಸಲು ಕಾರ್ಯ ನಿರ್ವಹಿಸುತ್ತಿದ್ದು ಸಂಸ್ಥೆಯ ಆಡಳಿತ, ಸಿಬ್ಬಂದಿ, ಇಂಧನ, ಇನ್ನಿತರೆ ವೆಚ್ಚವನ್ನು ನಿರ್ವಹಿಸಲು ಸಾರಿಗೆ ಮತ್ತು ಸಾರಿಗೇತರ ಆದಾಯವನ್ನೂ ಸಹ ಪರಿಗಣಿಸಬೇಕಾಗಿರುತ್ತದೆ. ಸಾರ್ವಜನಿಕರಿಗೆ ಉತ್ತ ಗುಣಮಟ್ಟದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಸಂಸ್ಥೆಯಲ್ಲಿನ ಹಳೆಯ ವಾಹನಗಳನ್ನು ಬದಲಾಯಿಸಿ, ಹೊಸ ಬಸ್ಸುಗಳನ್ನು ಖರೀದಿಸುವ ಅವಶ್ಯವಿರುತ್ತದೆ. ಈ ಹಿನ್ನಲೆಯಲ್ಲಿ 2017-18ನೇ ಸಾಲಿನ ಆಯವ್ಯಯದಲ್ಲಿ 1500 ಬಸ್ಸುಗಳನ್ನು ಖರೀದಿಸಲು ಬೆಂ.ಮ.ಸಾ.ಸಂಸ್ಥೆಗೆ ರೂ.450.00 ಕೋಟಿ ಅನುದಾನವನ್ನು ಒದಗಿಸಲಾಗಿರುತ್ತದೆ. ಕಳೆದ ವರ್ಷಗಳಲ್ಲಿ 857

		ಬಸ್ಸುಗಳನ್ನು ಖರೀದಿಸಲಾಗಿದ್ದು, ಸದರಿ ಅನುದಾನಲ್ಲಿ ರೂ.191.08 ಕೋಟಿ ಬಾಕಿ ಉಳಿದಿರುತ್ತದೆ. ಹಾಲಿ ಸಂಸ್ಥೆಯಲ್ಲಿರುವ ವಯೋಮಿತಿ ಮೀರಿರುವ ಹಳೆಯ ಬಸ್ಸುಗಳನ್ನು ಬದಲಾಯಿಸುವ ಸಲುವಾಗಿ, ಉಳಿದ ಅನುದಾನದ ಮೊತ್ತದಲ್ಲಿ 2021-22ನೇ ಸಾಲಿನಲ್ಲಿ 565 ಬಿ.ಎಸ್-6 ಲೇಲ್ಯಾಂಡ್ ಡೀಸೆಲ್ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ. ಪ್ರತಿ ಬಸ್ಸಿಗೆ ರೂ.33,82,000/- ರಂತೆ 565 ಬಸ್ಸುಗಳಿಗೆ ರೂ.191.08 ಕೋಟಿ ವೆಚ್ಚವಾಗಿರುತ್ತದೆ.

ಸಂಖ್ಯೆ: ಟಿಡಿ 74 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು